# ಸಾಕಾರ–ನಿರಾಕಾರ



ಒಂದರಲ್ಲಿ ವಿಶ್ವಾಸವಿದ್ದರೆ ಅದೇ ಯಥೇಷ್ಟ. ನಿರಾಕಾರದಲ್ಲಿ ವಿಶ್ವಾಸವೆ? ಬಹಳ ಒಳ್ಳೆಯದು. ಆದರೆ ಎಂದಿಗೂ ಹೀಗೆ ಯೋಚಿಸಬೇಡ–ಇದೇ ಕೇವಲ ಸತ್ಯ, ಉಳಿದುದೆಲ್ಲ ಮಿಥ್ಯಾ ಎಂದು. ತಿಳಿದುಕೊ–ನಿರಾಕಾರವೂ ಸತ್ಯ, ಸಾಕಾರವೂ ಸತ್ಯ. ಯಾವುದರಲ್ಲಿ ವಿಶ್ವಾಸವೊ ಅದರಲ್ಲಿ ದೃಢಬುದ್ಧಿ ಇಡು.

ಭಗವಂತ ಕೇವಲ ಸಾಕಾರ ಅಂತ ಹೇಳಿಬಿಟ್ಟರೆ ಹೇಗಾದೀತು? ಭಗವಂತ ಶ್ರೀಕೃಷ್ಣನ ರೂಪದಲ್ಲಿ ಬಂದಿದ್ದ ಹಾಗೆ, ಮನುಷ್ಯ ದೇಹಧಾರಣೆ ಮಾಡಿಕೊಂಡು ಬರುತ್ತಾನೆ ಎಂಬುದು ಖಂಡಿತ ಸತ್ಯ; ವಿವಿಧ ರೂಪಗಳನ್ನು ಧರಿಸಿ ಭಕ್ತರಿಗೆ ಗೋಚರನಾಗುತ್ತಾನೆ ಎಂಬುದೂ ಸತ್ಯ; ಆದರೆ ಆತ ನಿರಾಕಾರ ಎಂಬುದೂ ಸತ್ಯ; ಆತ ಅಖಂಡ ಸಚ್ಚಿದಾನಂದ ಬ್ರಹ್ಮ. ವೇದದಲ್ಲಿ ಹೇಳಿದೆ, ಆತ ಸಾಕಾರ ನಿರಾಕಾರ ಎರಡೂ ಎಂದು. ಅದರಲ್ಲಿ ಹೇಳಿದೆ, ಆತ ಸಗುಣನೂ ಹೌದು, ನಿರ್ಗುಣನೂ ಹೌದು ಎಂದು.

**ಒಬ್ಬ ಬ್ರಾಹ್ಮ ಭಕ್ತ:** ಮಹಾಶಯರೇ, ಭಗವಂತ ಸಾಕಾರನೆ ಅಥವಾ ನಿರಾಕಾರನೆ?

**ಶ್ರೀರಾಮಕೃಷ್ಣರು:** ಆತನ ಸಂಬಂಧವಾಗಿ, ಆತ ಕೇವಲ ಇದು ಮಾತ್ರವೇ ಎಂದು ಎಂದಿಗೂ ಹೇಳಲಾಗುವುದಿಲ್ಲ. ಆತ ನಿರಾಕಾರನೂ ಹೌದು, ಸಾಕಾರನೂ ಹೌದು. ಭಕ್ತರಿಗಾಗಿ ಆತ ಸಾಕಾರನಾಗುತ್ತಾನೆ. ಜ್ಞಾನಿಗಳಿಗೆ, ಈ ಜಗತ್ತು ಸ್ವಪ್ನವತ್ ಎಂಬ ಅಭಿಮತವುಳ್ಳವರಿಗೆ, ಆತ ನಿರಾಕಾರ. ಭಕ್ತನಿಗೆ ಗೊತ್ತಿದೆ ತಾನೂ ಒಂದು ವಸ್ತು, ಹಾಗೆಯೇ ಈ ಜಗತ್ತು ಕೂಡ. ಆದ್ದರಿಂದ ಭಗವಂತ ಭಕ್ತನಿಗೆ ವ್ಯಕ್ತಿರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಆದರೆ ಜ್ಞಾನಿ, ಉದಾಹರಣೆಗೆ ವೇದಾಂತವಾದಿ, ಕೇವಲ 'ನೇತಿ', 'ನೇತಿ' ಎಂಬ ವಿಚಾರದಲ್ಲಿ ತೊಡಗುತ್ತಾನೆ. ಈ ರೀತಿಯ ವಿಚಾರದಿಂದ ಜ್ಞಾನಿಯ ಅಂತರ್ದೃಷ್ಟಿಗೆ ಗೋಚರವಾಗುತ್ತದೆ, 'ಈ "ಅಹಂ" ಎಂಬುದೂ ಮಿಥ್ಯ. ಈ ಜಗತ್ತೂ ಮಿಥ್ಯಾಸ್ವಪ್ನದ ಹಾಗೆ.' ಬಳಿಕ ಜ್ಞಾನಿ ತನ್ನ ಆಂತರಿಕ ಪ್ರಜ್ಞೆಯಲ್ಲಿ ಬ್ರಹ್ಮನನ್ನು ಸಾಕ್ಷಾತ್ಕಾರಮಾಡಿಕೊಳ್ಳುತ್ತಾನೆ. ಬ್ರಹ್ಮ ಏನು ಎಂಬುದನ್ನು ಆತ ಬಾಯಿಂದ ಹೇಳಲಾರ.

ವೇದಾಂತದ ವಿಚಾರದ ಮುಂದೆ ಭಗವಂತನ ರೂಪಗಳೆಲ್ಲ ಗಾಳಿಯಲ್ಲಿ ಹಾರಿಹೋಗಿಬಿಡುತ್ತವೆ. ಆದರೆ ಕೊನೆಯ ಸಿದ್ಧಾಂತ: ಬ್ರಹ್ಮನೇ ಸತ್ಯ; ನಾಮರೂಪಯುಕ್ತ ಈ ಜಗತ್ತು ಮಿಥ್ಯಾ. 'ನಾನು ಭಕ್ತ' ಎಂಬ ಭಾವನೆ ಭಕ್ತನಲ್ಲಿ ಇರುವವರೆಗೆ ಆತನಿಗೆ ಸಾಧ್ಯವಾಗುತ್ತದೆ ಭಗವಂತನನ್ನು ದರ್ಶನಮಾಡಲು, ಆತನನ್ನು ಒಬ್ಬ ವ್ಯಕ್ತಿ ಎಂದು ಭಾವಿಸಲು. ವಿಚಾರದೃಷ್ಟಿಯಿಂದ ನೋಡಿದರೆ ಭಕ್ತನ 'ಅಹಂ' ಎಂಬುದು ಆತನನ್ನು ಭಗವಂತನಿಂದ ಒಂದು ಸ್ವಲ್ಪ ದೂರದಲ್ಲೇ ನಿಲ್ಲಿಸಿಬಿಟ್ಟಿರುತ್ತದೆ. ಕೃಷ್ಣನ ಅಥವಾ ಕಾಳಿಯ ವಿಗ್ರಹ ಮೂರುವರೆ ಮೊಳ ಮಾತ್ರ ಇದೆಯಲ್ಲ ಏಕೆ ಗೊತ್ತೆ? ಸೂರ್ಯ ದೂರದಲ್ಲಿರುವುದರಿಂದ ಚಿಕ್ಕದಾಗಿ ಕಾಣುತ್ತಾನೆ. ಹತ್ತಿರ ಹೋಗಿ ನೋಡು, ಆತ ಎಷ್ಟೊಂದು ದೊಡ್ಡವನು, ಗ್ರಹಿಸಲೇ ಸಾಧ್ಯವಾಗುವುದಿಲ್ಲ. ಮತ್ತೆ ನೋಡು, ಕಾಳಿಯ ಮತ್ತು ಕೃಷ್ಣನ ವಿಗ್ರಹ ಕಪ್ಪಾಗಿವೆಯಲ್ಲ ಏಕೆ? ಅದಕ್ಕೂ ಕಾರಣ, ದೂರವೇ. ಉದಾಹರಣೆಗೆ ಸಮುದ್ರದ ನೀರು ಅದು ದೂರದಿಂದ ಹಸುರು, ನೀಲಿ ಅಥವಾ ಕಪ್ಪು ಬಣ್ಣದ್ದಾಗಿ ಕಾಣಿಸಿಕೊಳ್ಳುತ್ತದೆ. ಹತ್ತಿರ ಹೋಗಿ ಕೈಯಲ್ಲಿ ಒಂದು ಸ್ವಲ್ಪ ನೀರು ತೆಗೆದುಕೊಂಡು ನೋಡು. ಅದಕ್ಕೆ ಯಾವ ಬಣ್ಣವೂ ಇಲ್ಲ. ಆಕಾಶ ದೂರದಿಂದ ನೀಲವರ್ಣದ್ದಾಗಿ ಕಾಣುತ್ತದೆ. ಹತ್ತಿರದಲ್ಲಿ ನೋಡು, ಅದಕ್ಕೆ ಯಾವ ಬಣ್ಣವೂ ಇಲ್ಲ.

ಅದಕ್ಕಾಗಿಯೇ ನಾನು ಹೇಳುವುದು, ವೇದಾಂತ ವಿಚಾರದ ದೃಷ್ಟಿಯಿಂದ ಬ್ರಹ್ಮ ನಿರ್ಗುಣ ಎಂಬುದಾಗಿ. ಆತನ ನೈಜರೂಪ ಏನು ಎಂಬುದನ್ನು ಬಾಯಿಂದ ವರ್ಣನೆ ಮಾಡಲಾಗುವುದಿಲ್ಲ. ಆದರೆ ನಿನ್ನ ವ್ಯಕ್ತಿತ್ವ ಸತ್ಯವಾಗಿರುವವರೆಗೆ ಜಗತ್ತೂ ಸತ್ಯ. ಭಗವಂತನ ನಾನಾ ರೂಪಗಳೂ ಸತ್ಯ! ಭಗವಂತ ಒಬ್ಬ ವ್ಯಕ್ತಿ ಎಂಬ ಭಾವನೆಯೂ ಸತ್ಯ.

ಭಕ್ತರು–ಎಂದರೆ ವಿಜ್ಞಾನಿಗಳು–ಸಾಕಾರ ನಿರಾಕಾರ ಎರಡನ್ನೂ, ರೂಪ ಅರೂಪ ಎರಡನ್ನೂ ಸ್ವೀಕರಿಸುತ್ತಾರೆ. ಅಪಾರವಾದ ಮಹಾ ಸಾಗರದಲ್ಲಿ ಅನಂತ ಜಲರಾಶಿಯಲ್ಲಿ ಶೈತ್ಯದ ದೆಸೆಯಿಂದ ನೀರು ಅಲ್ಲಿ ಇಲ್ಲಿ ಹಿಮಗಡ್ಡೆಗಳಾಗಿ ಪರಿವರ್ತನೆ ಹೊಂದಿರುವುದನ್ನು ನಾವು ನೋಡಬಹುದು. ಅದೇ ರೀತಿಯಾಗಿ ಭಕ್ತನ ಭಕ್ತಿ ಎಂಬ ಶೈತ್ಯದ ದೆಸೆಯಿಂದ ಆ ಅನಂತ ಸಾಂತವಾಗಿ, ಎಂದರೆ ಸಾಕಾರ ರೂಪವನ್ನು ತಾಳಿ ಭಕ್ತನಿಗೆ ಗೋಚರವಾಗುತ್ತದೆ. ಯಾವ ರೀತಿಯಾಗಿ ಸೂರ್ಯೋದಯವಾದ ನಂತರ ಹಿಮಗಡ್ಡೆ ಕರಗಿ ನೀರಾಗುವುದೊ, ಅದೇ ರೀತಿಯಾಗಿ ಜ್ಞಾನಸೂರ್ಯವಾದ ನಂತರ ಸಾಕಾರರೂಪವು ಕರಗಿ ಎಂದಿನ ನಿರಾಕಾರ ಸ್ಥಿತಿಗೆ–ಅನಂತ ಸ್ಥಿತಿಗೆ ಹಿಂದಿರುಗುತ್ತದೆ.

ಭಗವಂತನ ಕಡೆಗೆ ಮುಂದುವರಿದಂತೆಲ್ಲ ಆತನ ಉಪಾಧಿಗಳೂ ಕಡಿಮೆಯಾಗುವುದು ನಮ್ಮ ಕಣ್ಣಿಗೆ ಕಾಣ ಬರುತ್ತದೆ. ಒಬ್ಬ ಭಕ್ತನಿಗೆ ಮೊಟ್ಟಮೊದಲು ಭಗವಂತನ ದರ್ಶನ ದೊರೆತಾಗ ಆತನಿಗೆ ಹತ್ತು ಭುಜಗಳಿರುವಂತೆ ದರ್ಶನವಾಯಿತು. ಇನ್ನೂ ಸ್ವಲ್ಪ ಹತ್ತಿರಕ್ಕೆ ಹೋಗಿ ನೋಡುತ್ತಾನೆ, ಆರೇ ಭುಜ. ಇನ್ನೂ ಹತ್ತಿರಕ್ಕೆ ಹೋಗಿ ಹೋಡುತ್ತಾನೆ, ಆತ ಎರಡು ಭುಜದ ಗೋಪಾಲಮೂರ್ತಿಯಂತೆ ಕಾಣುತ್ತಿದ್ದಾನೆ. ಹತ್ತಿರ ಹತ್ತಿರಕ್ಕೆ ಹೋದ ಹಾಗೆಲ್ಲ ಆತನ ಐಶ್ವರ್ಯಗಳೂ ಕಡಿಮೆ ಕಡಿಮೆಯಾಗಿ ಕಾಣಿಸಿಕೊಳ್ಳುತ್ತವೆ. ಮತ್ತೂ ಹತ್ತಿರಕ್ಕೆ ಹೋಗಿ ನೋಡಿದಾಗ ಕೇವಲ ನಿರುಪಾಧಿಕ ಜ್ಯೋತಿಯ ದರ್ಶನ ದೊರೆಯುತ್ತದೆ.

– **'ಶ್ರೀರಾಮಕೃಷ್ಣ ವಚನವೇದ'**ದಿಂದ

ಸ್ವಾಮಿ ನಿತ್ಯಸ್ಥಾನಂದ

# ಚತುರ್ವಿಧ ಭಕ್ತರು




ಶ್ರೀಕೃಷ್ಣನು ಏಳನೆಯ ಅಧ್ಯಾಯದಲ್ಲಿ ನಾಲ್ಕು ಬಗೆಯ ಭಕ್ತರನ್ನು ಕುರಿತು ಹೇಳುತ್ತಾನೆ.

**ಚತುರ್ವಿಧಾ ಭಜಂತೇ ಮಾಂ**
**ಜನಾಃ ಸುಕೃತಿನೋಽರ್ಜುನ ।**
**ಆರ್ತೋ ಜಿಜ್ಞಾಸುರರ್ಥಾರ್ಥೀ**
**ಜ್ಞಾನೀ ಚ ಭರತರ್ಷಭ ॥ (೭ : ೧೬)**

"ನಾಲ್ಕು ಬಗೆಯ ಸುಕೃತಿಗಳಾದ ಜನರು ನನ್ನನ್ನು ಭಜಿಸುತ್ತಾರೆ: ಆರ್ತ, ಜಿಜ್ಞಾಸು, ಅರ್ಥಾರ್ಥಿ ಮತ್ತು ಜ್ಞಾನಿ." ಇವರೆಲ್ಲರೂ ಭಗವಂತನನ್ನು ಭಜಿಸುವುದು ತಾವು ಗಳಿಸಿದ ಪುಣ್ಯದ ಫಲವಾಗಿಯೇ (ಸುಕೃತಿನಃ). ಇವರೆಲ್ಲರೂ ಶ್ರೇಷ್ಠರೆಂದು (ಉದಾರಾಃ) ಶ್ರೀಕೃಷ್ಣನು ಮುಂದಿನ ಶ್ಲೋಕದಲ್ಲಿ ಹೇಳುತ್ತಾನೆ. ಇವರೆಲ್ಲರೂ ಆಧ್ಯಾತ್ಮಿಕ ಜೀವನದ ವಿವಿಧ ಹಂತಗಳಲ್ಲಿ ಇರುವವರು.

**ಆರ್ತ:** ಆಧ್ಯಾತ್ಮಿಕ ಜೀವನದ ಪ್ರಾರಂಭಾವಸ್ಥೆಯಲ್ಲಿ ಇರುವವನು. ಹಳೆಯ ಸಂಸ್ಕಾರಗಳ ಪ್ರಭಾವದಿಂದಾಗಿ ವಿಷಯಾಸಕ್ತಿ ಇನ್ನೂ ಬಿಟ್ಟುಹೋಗಿರುವುದಿಲ್ಲ, ಭಗವಂತನ ಕಡೆಗೆ ಒಲವೂ ಇರುತ್ತದೆ. ಸಾಧಕನು ವಿಷಯಾಸಕ್ತಿಯಿಂದ ಪಾರಾಗಲು ಆರ್ತನಾಗಿ ಭಗವಂತನ ಸಹಾಯವನ್ನು ಬೇಡುತ್ತಾನೆ. ಈ ಹಂತದಲ್ಲಿ ಸಾಧಕನು ನರಕಯಾತನೆಯನ್ನು ಅನುಭವಿಸಬೇಕಾಗುತ್ತದೆ. ಅವನಿಗೆ ವಿಷಯಸುಖವೂ ಇಲ್ಲ, ಅಧ್ಯಾತ್ಮಸುಖ ಇನ್ನೂ ಬಹುದೂರ. ಒಂದು ಗಿಡವನ್ನು ಒಂದು ಕಡೆಯಿಂದ ಕಿತ್ತು ಬೇರೊಂದು ಜಾಗದಲ್ಲಿ ನೆಟ್ಟಂತೆ ಅದು. ಅದಕ್ಕೆ ಹಿಂದಿನ ನೆಲೆಯೂ ಇಲ್ಲ, ಮುಂದಿನ ನೆಲೆಯೂ ಇಲ್ಲ, ಮುಂದೆ ಸರಿಯಾಗಿ ಬೇರೂರುವವರೆಗೆ ಅದು ಸತ್ತಂತೆಯೇ ಆಗಿರುತ್ತದೆ. ಶ್ರೀರಾಮಕೃಷ್ಣರು ಗುಲಾಬಿ ಗಿಡದ ಉದಾಹರಣೆಯನ್ನು ನೀಡುತ್ತಿದ್ದರು. ಮಾಲಿಯು ಗುಲಾಬಿಗಿಡದ ಬೇರನ್ನೆಲ್ಲ ಬಿಡಿಸುತ್ತಾನೆ – ಅದು ಗಾಳಿಗೆ ತೆರೆದುಕೊಳ್ಳಲೆಂದು. ಅನಂತರ ಗೊಬ್ಬರ ಹಾಕಿ ಮುಚ್ಚುತ್ತಾನೆ. ಆ ರೀತಿ ಮಾಡುವುದು ಗಿಡಕ್ಕೆ ಯಾತನೆಯಾದರೂ ಅದರ ಬೆಳವಣಿಗೆಗೆ ಅದು ಆವಶ್ಯಕ. ಹಾಗೆಯೇ ಆಧ್ಯಾತ್ಮಿಕ ಜೀವನದಲ್ಲಿ ಕಷ್ಟಸಂಕಟಗಳು ಆವಶ್ಯಕ. ನಮ್ಮ ಮನಸ್ಸು ವಿಷಯಭೂಮಿಯಲ್ಲಿ ಅತ್ಯಂತ ದೃಢವಾಗಿ ಬೇರುಬಿಟ್ಟಿರುತ್ತದೆ. ಈಗ ಅದನ್ನು ಕಿತ್ತು ಅಧ್ಯಾತ್ಮಭೂಮಿಯಲ್ಲಿ ನೆಡಬೇಕಾಗಿದೆ. ಮನಸ್ಸು ಅಷ್ಟು ಸುಲಭವಾಗಿ ಕೇಳುತ್ತದೆಯೆ? ಅದು ಚಡಪಡಿಸುತ್ತದೆ; ಅಯ್ಯೋ, ನನ್ನ ಗತಿಯೇನು ಎಂದು ನಿಟ್ಟುಸಿರುಬಿಡುತ್ತದೆ. ಅದು ಹಸಿವು ನೀರಡಿಕೆಗಳಿಂದ ಅತ್ಯಂತ ಸಂಕಟವನ್ನು ಅನುಭವಿಸಬೇಕಾಗುತ್ತದೆ. ತಡೆಯಲಾಗದ ಸಂಕಟವಾದಾಗ ಸ್ವಲ್ಪ ಆಧ್ಯಾತ್ಮಿಕ ಆಹಾರ ಸಿಕ್ಕಿದಂತಾಗುತ್ತದೆ. ಆದರೆ ಮತ್ತೆ ಅದೇ ಗೋಳು. ಅಧ್ಯಾತ್ಮದಲ್ಲಿ ಸ್ಥಿರವಾಗಿ ನೆಲೆ ನಿಲ್ಲುವವರೆಗೆ ಈ ಗೋಳಾಟ ಮುಂದುವರಿಯುತ್ತದೆ.

ಒಂದು ಮಣ್ಣಿನ ಮುದ್ದೆ ಮತ್ತು ಹುಳು ಭಗವಂತನ ಸಾನ್ನಿಧ್ಯವನ್ನು ಪಡೆಯಬೇಕೆಂದು ಹಂಬಲಿಸಿದವು. ಒಬ್ಬ ಕುಂಬಾರನು ಒಂದು ಮಣ್ಣಿನ ಮುದ್ದೆಯನ್ನು ತೆಗೆದುಕೊಂಡು ಹೋಗಿ ಅದರ ಮೇಲೆ ನೀರನ್ನು ಸುರಿದು ನಿರ್ದಾಕ್ಷಿಣ್ಯವಾಗಿ ಅದನ್ನು ಹಿಸುಕತೊಡಗಿದನು; ಅದರಲ್ಲಿರುವ ಸಣ್ಣ ಕಲ್ಲುಗಳು ಕಸಕಡ್ಡಿ ಇತ್ಯಾದಿಗಳನ್ನು ತೆಗೆದುಹಾಕತೊಡಗಿದನು. ಮಣ್ಣು ಭಾವಿಸಿತು, 'ನಾನು ದೇವರ ಸಾನ್ನಿಧ್ಯವನ್ನು ಬಯಸಿದೆ, ಆದರೆ ಈ ರಾಕ್ಷಸನ ಕೈಯಲ್ಲಿ ಸಿಕ್ಕಿಹಾಕಿಕೊಂಡೆನಲ್ಲ' ಎಂದು. ಅಷ್ಟಕ್ಕೇ ಸಂಕಟ ಮುಗಿಯಲಿಲ್ಲ. ಕುಂಬಾರನು ಅದನ್ನು ಕಾಲಿನಿಂದ ಚೆನ್ನಾಗಿ ತುಳಿಯತೊಡಗಿದನು. ಈಗ ಅದರ ವೇದನೆ ಹೇಳತೀರದು. ಈಗ ತುಳಿಯುವುದು ನಿಂತಿತು, ಕುಂಬಾರನು ವಿಶ್ರಾಂತಿಗಾಗಿ ಹೋದನು. ತಾನು ಪಾರಾದೆ ಎಂದು ಮಣ್ಣು ಭಾವಿಸಿತು. ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಅವನು ಬಂದು ಆ ಮಣ್ಣನ್ನು ಚಕ್ರದ ಮೇಲೆ ಹಾಕಿ, ತಿದ್ದಿತೀಡಿ, ಆ ಮಣ್ಣಿಗೆ ಒಂದು ರೂಪವನ್ನು ಕೊಡಲು ಪ್ರಾರಂಭಿಸಿದನು. ಈಗ ಮಣ್ಣಿಗೆ ತಡೆಯಲಾಗದ ಹಿಂಸೆ. ಕೆಲಕಾಲದ ನಂತರ ಆ ಮಣ್ಣು ಹೂವಿನಕುಂಡದ ಆಕಾರವನ್ನು ಪಡೆಯಿತು. ಇಲ್ಲಿಗೆ ತನ್ನ ಕಷ್ಟ ಮುಗಿಯಿತೆಂದು ಅದು ಭಾವಿಸಿತು. ಈಗ ಕುಂಬಾರನು ಅದನ್ನು ಆವಿಗೆಯಲ್ಲಿ ಬೇಯಿಸತೊಡಗಿದನು. "ಈ ಅಗ್ನಿಪರೀಕ್ಷೆಯಲ್ಲಿ ನಾನು ಖಂಡಿತ ಉಳಿಯುವುದಿಲ್ಲ, ಈ ನರಕಾಗ್ನಿಯಿಂದ ನಾನು ಪಾರಾಗಲಾರೆ" ಎಂದು ಅಪಾರ ವೇದನೆ ಸಂಕಟಗಳಿಂದ ಮಣ್ಣು ಪರಿತಪಿಸತೊಡಗಿತು. ಕೆಲವು ದಿನಗಳಾದ ಮೇಲೆ ಕುಂಬಾರನು ಅದನ್ನು ಹೊರತೆಗೆದನು. ಬೇರೊಬ್ಬರು ಅದನ್ನು ತೆಗೆದುಕೊಂಡು ಹೋಗಿ, ಅದಕ್ಕೆ ಮಣ್ಣುಗೊಬ್ಬರ ಹಾಕಿ, ಒಂದು ಹೂವಿನ ಗಿಡವನ್ನು ನೆಟ್ಟರು. ಗಿಡ ಬೆಳೆದು ಬಣ್ಣಬಣ್ಣದ ಸುಂದರ ಹೂಗಳು ಅರಳಿದವು. ಆ ಹೂವಿನ ಕುಂಡವನ್ನು ದೇವಾಲಯದ ದೇವರ ಪಾದದಡಿ ಇರಿಸಲಾಯಿತು. ಹುಳು ಇಷ್ಟೊಂದು ಕಷ್ಟವನ್ನು ಅನುಭವಿಸುವ ಬದಲು ಒಂದು ಸುಲಭೋಪಾಯವನ್ನು ಕಂಡುಹಿಡಿಯಿತು. ಅದು ಒಂದು ಹೂವಿನೊಳಗೆ ಹೋಗಿ ಅವಿತುಕೊಂಡಿತು. ಪೂಜೆಗಾಗಿ ಹೂವನ್ನು ಕಿತ್ತುಕೊಂಡು ಹೋದರು. ಪೂಜೆಗೆ ಮುಂಚೆ ಹೂವುಗಳನ್ನು ಪರೀಕ್ಷಿಸುವಾಗ ಒಂದು ಹೂವಿನಲ್ಲಿ ಈ ಹುಳು ಇರುವುದು ಪತ್ತೆಯಾಯಿತು. ಹುಳುವಿನ ಸಮೇತ ಹೂವನ್ನು ಹಿಸುಕಿ ಹೊರಗೆ ಬಿಸಾಕಿದರು. ಮಹತ್ತರವಾದುದು ಮಹತ್ಸಾಧನೆಯಿಲ್ಲದೆ ಲಭಿಸದು.

**ಜಿಜ್ಞಾಸು:** ಪೂರ್ವಸಂಸ್ಕಾರಗಳ ಸೆಳೆತ ಕಡಿಮೆಯಾದಷ್ಟು ಭಗವದ್ ವಿಷಯದ ಕಡೆ ಮನಸ್ಸು ಒಲಿಯತೊಡಗುತ್ತದೆ. ಈ ಒಲವು ಮೊದಲು ಜಿಜ್ಞಾಸೆಯ ರೂಪದಲ್ಲಿ ವ್ಯಕ್ತವಾಗುತ್ತದೆ. ನರೇಂದ್ರನು (ಮುಂದೆ ಸ್ವಾಮಿ ವಿವೇಕಾನಂದ) ದೇವರಿದ್ದಾನೆಯೇ ಎಂದು ಎಲ್ಲರನ್ನೂ ಪ್ರಶ್ನಿಸತೊಡಗಿದನು. ಶ್ರೀರಾಮಕೃಷ್ಣರೂ, ಪೂಜೆ ಮಾಡುತ್ತಿದ್ದಾಗ ಇದು ಕೇವಲ ಕಲ್ಲಿನ ವಿಗ್ರಹವೇ, ಅಥವಾ ಇದರ ಹಿಂದೆ ಏನಾದರೂ ಸತ್ಯವಿದೆಯೇ ಎಂದು ಪ್ರಶ್ನಿಸತೊಡಗಿದರು. ಬುದ್ಧನೂ ಇದೇ ರೀತಿಯ ಪ್ರಶ್ನೆಯೊಂದಿಗೆ ರಾಜ್ಯವನ್ನು ತ್ಯಜಿಸಿ ಹೊರಟುಹೋದನು. ಈ ಪ್ರಪಂಚದ ಹಿಂದಿರುವ ಸತ್ಯವಾವುದು, ಈ ವ್ಯಕ್ತಿತ್ವದ ಹಿಂದಿರುವ ಸತ್ಯವಾವುದು – ಇಂತಹ ಪ್ರಶ್ನೆಗಳು ಪುರಾತನ ಕಾಲದಿಂದಲೂ ಪ್ರಚಲಿತವಾಗಿವೆ. ಈ ರೀತಿಯ ತಾತ್ತ್ವಿಕ ಪ್ರಶ್ನೆಗಳ ತಳಹದಿಯ ಮೇಲೆ ಅನೇಕ ಸಿದ್ಧಾಂತ ಸೌಧಗಳನ್ನು ನಿರ್ಮಿಸಲಾಗಿದೆ. ಇವುಗಳನ್ನೆಲ್ಲ ಓದಿದರೂ ಕೂಡ ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಪ್ರತಿಯೊಬ್ಬರೂ ತಾವೇ ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕು, ಇತರರ ಅಭಿಪ್ರಾಯಗಳು ತೃಪ್ತಿಯನ್ನು ನೀಡುವುದಿಲ್ಲ. ಬುದ್ಧನು ಹಿಂದಿನ ಶಾಸ್ತ್ರಗಳನ್ನೆಲ್ಲ ಅಧ್ಯಯನ ಮಾಡಿದ್ದನು, ಅವನಿಗೆ ತಾತ್ತ್ವಿಕವಾಗಿ ಎಲ್ಲ ವಿಷಯಗಳ ಪರಿಚಯವಿತ್ತು. ಆದರೂ ಅವನೇ ಕಠಿಣ ಸಾಧನೆ ಮಾಡಿ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಾಯಿತು. ಸ್ವಾಮಿ ವಿವೇಕಾನಂದರೂ ಎಲ್ಲ ಅಧ್ಯಯನ ಮಾಡಿದ್ದರು. ಆದರೂ ಅವರ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು – ಶ್ರೀರಾಮಕೃಷ್ಣರನ್ನು ಸಂಧಿಸುವವರೆಗೂ.

ಬಹುಶಃ ಎಲ್ಲ ಸಾಧಕರ ಜೀವನದಲ್ಲಿಯೂ ಜಿಜ್ಞಾಸಾ ಅವಧಿಯೊಂದು ಇರುತ್ತದೆ. ಎಷ್ಟೇ ಓದಿದರೂ ಕೇಳಿದರೂ, ಬುದ್ಧಿಗೆ ತೃಪ್ತಿಯುಂಟಾದರೂ, ಹೃದಯಕ್ಕೆ ತೃಪ್ತಿಯುಂಟಾಗುವುದಿಲ್ಲ – 'ಬುದ್ಧಿಯರಿತರೂ ಹೃದಯವರಿಯದ ಸ್ಥಿತಿ' ಅದು. ಅನೇಕ ಬಗೆಯ ಸಂದೇಹಗಳಿಂದ ಮನಸ್ಸು ತೊಳಲಾಡುತ್ತದೆ. ಭಗವಂತನು ನಿಜವಾಗಿಯೂ ಇರುವನೆ, ಇರುವುದಾದರೆ ನನ್ನ ಪ್ರಾರ್ಥನೆಯನ್ನೇಕೆ ಆಲಿಸುವುದಿಲ್ಲ? ವೇದಪುರಾಣಗಳಲ್ಲಿ ಹೇಳಿರುವುದೆಲ್ಲ ಕೇವಲ ಕಲ್ಪನೆಗಳಿರಬಹುದೇ? ಸಂತರ ಅನುಭವಗಳೆಲ್ಲ ಬುದ್ಧಿಭ್ರಮಣೆಯ ಪರಿಣಾಮವಿರಬಹುದೇ? ಪುರಂದರದಾಸರು, "ಕರಿ ಧ್ರುವ ಬಲಿ ಪಾಂಚಾಲಿ ಅಹಲ್ಯೆಯ ಪೊರೆದವ ನೀನಂತೆ, ಅರಿತು ವಿಚಾರಿಸಿ ನೋಡಲದೆಲ್ಲವೂ ಪರಿಪರಿ ಕಂತೆಗಳಂತಿವೆ ಕೃಷ್ಣ" ಎಂದು ತಮ್ಮ ಸಂದೇಹವನ್ನು ವ್ಯಕ್ತಪಡಿಸುತ್ತಾರೆ. ಸ್ವಾಮಿ ತುರೀಯಾನಂದರು ಒಮ್ಮೆ ಭಕ್ತರೊಡನೆ ಮಾತನಾಡುತ್ತಿರುವಾಗ, "ಭಗವಂತನ ಅಸ್ತಿತ್ವವನ್ನು ನೀವು ಎಂದಾದರೂ ಸಂದೇಹಿಸಿದುದಿದೆಯೆ?" ಎಂದು ಪ್ರಶ್ನಿಸಿದರು. ಎಲ್ಲರೂ "ಇಲ್ಲ, ಮಹಾರಾಜ್" ಎಂದು ಉತ್ತರಿಸಿದರು. ಆಗ ಸ್ವಾಮಿ ತುರೀಯಾನಂದರು ಹೇಳಿದರು: "ನಾನು ಹಲವು ವರ್ಷಗಳ ಕಾಲ ನಾಸ್ತಿಕ ಭಾವದಿಂದ ತೊಳಲಾಡಿದೆ. ಒಂದು ನಾಸ್ತಿಕ ವಿಷಯಕ್ಕೆ ಸಂಬಂಧಿಸಿದ ಪುಸ್ತಕವನ್ನು ಓದಿ, ಆ ಮನಃಸ್ಥಿತಿ ನನಗೆ ಉಂಟಾಗಿತ್ತು." ಇದನ್ನು ಕೇಳಿದ ಮೇಲೆ ಭಕ್ತರು, "ಹೌದು ಮಹಾರಾಜ್, ನಮಗೂ ಇಂತಹ ಸಂದೇಹಗಳು ಬರುತ್ತವೆ" ಎಂದು ಒಪ್ಪಿಕೊಂಡರು.

ಕಾಲಗಣನೆಯ ಹಿಂದಿನಿಂದಲೂ ಈ ಆತ್ಯಂತಿಕ ಸತ್ಯಾನ್ವೇಷಣೆ ನಡೆದೇ ಇದೆ. ಉಪನಿಷತ್ತುಗಳಲ್ಲಿ ಈ ಅನ್ವೇಷಣೆಯು ಒಂದು ನಿರ್ದಿಷ್ಟ ರೂಪವನ್ನು ಪಡೆದಿರುವುದನ್ನು ಕಾಣುತ್ತೇವೆ. ಮುಖ್ಯವಾಗಿ ಎರಡು ಅನ್ವೇಷಣೆಗಳನ್ನು ನಾವು ಕಾಣುತ್ತೇವೆ. ವಿಷಯ ಜಗತ್ತಿನ ಹಿಂದಿರುವ ಸತ್ಯ ಯಾವುದು? ವಿಷಯಿ ಜಗತ್ತಿನ ಹಿಂದಿರುವ ಸತ್ಯ ಯಾವುದು? ಶ್ವೇತಾಶ್ವತರ ಉಪನಿಷತ್ತಿನಲ್ಲಿ ನಾವು ಓದುತ್ತೇವೆ:

**ಕಿಂ ಕಾರಣಂ ಬ್ರಹ್ಮ ಕುತಃ ಸ್ಮ ಜಾತಾ,**
**ಜೀವಾಮ ಕೇನ ಕ್ವಚ ಸಂಪ್ರತಿಷ್ಠಾ ಃ ।**
**ಅಧಿಷ್ಠಿತಾ ಃ ಕೇನ ಸುಖೇತರೇಷು,**
**ವರ್ತಾಮಹೇ ಬ್ರಹ್ಮವಿದೋ ವ್ಯವಸ್ಥಾಮ್ ॥**

*(ಶ್ವೇತಾಶ್ವತರೋಪನಿಷತ್, ೧.೧)*

"ಬ್ರಹ್ಮವು ಜಗತ್ಕಾರಣವೇ? ನಾವು ಎಲ್ಲಿಂದ ಹುಟ್ಟಿದ್ದೇವೆ? ನಾವು ಯಾವುದರಿಂದ ಬದುಕಿದ್ದೇವೆ? ನಾವು ಯಾವುದರಲ್ಲಿ ಸ್ಥಿತರಾಗಿದ್ದೇವೆ? ನಾವು ಯಾವುದರಿಂದ ನಿಯಮಿತರಾಗಿ, ಸುಖದಲ್ಲಾಗಲಿ ದುಃಖದಲ್ಲಾಗಲಿ ಇರುತ್ತೇವೆ?" ಇವು ವಿಷಯನಿಷ್ಠ ಅನ್ವೇಷಣೆ. ಹೀಗೆಯೇ ವಿಷಯಿನಿಷ್ಠ ಅನ್ವೇಷಣೆಯನ್ನೂ ಕುರಿತು ಕೇನೋಪನಿಷತ್ತಿನಲ್ಲಿ ಹೀಗೆ ಓದುತ್ತೇವೆ:

**ಕೇನೇಷಿತಂ ಪತತಿ ಪ್ರೇಷಿತಂ ಮನಃ**
**ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತ ಃ ।**
**ಕೇನೇಷಿತಾಂ ವಾಚಮಿಮಾಂ ವದಂತಿ**
**ಚಕ್ಷುಃ ಶ್ರೋತ್ರಂ ಕ ವು ದೇವೋ ಯುನಕ್ತಿ ॥**

*(ಕೇನೋಪನಿಷತ್, ೧.೧)*

"ಯಾರಿಂದ ಪ್ರೇರಿತವಾಗಿ ಮನಸ್ಸು ತನ್ನ ಕಾರ್ಯದಲ್ಲಿ ತೊಡಗುತ್ತದೆ? ಪ್ರಾಣಕ್ರಿಯೆಗಳನ್ನು ಪ್ರೇರೇಪಿಸುವವರು ಯಾರು? ಯಾರ ಇಚ್ಛಾನುಸಾರ ಮಾತು ಕೆಲಸ ಮಾಡುತ್ತದೆ? ಇಂದ್ರಿಯಗಳು ತಮ್ಮ ತಮ್ಮ ಕಾರ್ಯವನ್ನು ಮಾಡಲು ಯಾರು ಪ್ರೇರೇಪಿಸುತ್ತಾರೆ?" ಈ ಪ್ರಶ್ನೆಗಳ ಉತ್ತರವೇ ಉಪನಿಷತ್ ಸಾಹಿತ್ಯ.

**ಅರ್ಥಾರ್ಥಿ :** ನಾವು ಜೀವಿಸಿರುವುದು ಏತಕ್ಕೆ? ಜೀವನಕ್ಕೆ ಒಂದು ಅರ್ಥವಿದೆಯೇ? ಇಂತಹ ಪ್ರಶ್ನೆಗಳು ಮನುಷ್ಯತ್ವದ ಪ್ರತೀಕ. ಇವುಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಐಷಾರಾಮ ಜೀವನ ನಡೆಸುವುದು – ಅದು ಎಷ್ಟೇ ಸುಸಂಸ್ಕೃತವಾಗಿದ್ದರೂ – ಪ್ರಾಣಿ ಸಹಜ. ಅರ್ಥಾನ್ವೇಷಣೆಯು ಮಾನವನ ಸಹಜ ಪ್ರವೃತ್ತಿ. **ಅರ್ಥ** ಎಂದರೇನು? ಒಂದು ವ್ಯಕ್ತಿಯಾಗಲಿ ವಸ್ತುವಾಗಲಿ ಅರ್ಥವನ್ನು ಪಡೆಯುವುದು ಯಾವಾಗ? ಯಾವುದೇ ವಸ್ತುವಾಗಲಿ ಯಾವುದರೊಡನೆಯೂ ಸಂಬಂಧವಿಲ್ಲದೆ ಇದ್ದಾಗ ಅದಕ್ಕೆ ಯಾವುದೇ ಅರ್ಥವೂ ಇರುವುದಿಲ್ಲ. ಇತರರೊಡನೆ ಸಂಬಂಧ ಏರ್ಪಟ್ಟಾಗ ಅರ್ಥವುಂಟಾಗುತ್ತದೆ. ವ್ಯಕ್ತಿಯು ಕೂಡ ಅರ್ಥವನ್ನು ಕಂಡುಕೊಳ್ಳಲು ವಸ್ತುಗಳೊಡನೆ, ಇತರರೊಡನೆ, ಕುಟುಂಬದೊಡನೆ ಅಥವಾ ಸಮಾಜದೊಡನೆ ಸಂಬಂಧವನ್ನು ಬೆಳೆಸಲು ಪ್ರಯತ್ನಿಸುತ್ತಾನೆ. ವಿವಿಧ ಚಟುವಟಿಕೆಗಳ ಮೂಲಕ, ತನ್ನ ಶಕ್ತಿ ಸಾಮರ್ಥ್ಯ ಪ್ರತಿಭೆಗಳನ್ನು ಅಭಿವ್ಯಕ್ತಿಗೊಳಿಸುವುದರ ಮೂಲಕ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಇವೆಲ್ಲವೂ ಆಂಶಿಕವಾಗಿ ವ್ಯಕ್ತಿಯ ಜೀವನಕ್ಕೆ ಅರ್ಥವನ್ನು ನೀಡಬಲ್ಲವು. ಒಟ್ಟು ಅಸ್ತಿತ್ವದೊಡನೆ, ಪೂರ್ಣದೊಡನೆ ಒಂದಾದಾಗಲೇ, ಅಂಶವು ಅಂಶಿಯೊಡನೆ ಒಂದಾದಾಗಲೇ